ದಿನಾಂಕ 11-01-2024 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** 1 ನೇ ಪ್ರತಿವಾದಿಯ ಪರ ಶ್ರೀ ಎಸ್ ಆರ್ ಎಚ್ ವಕೀಲರಿಂದ.

ಪಟ್ಟಣ ಪಂಚಾಯತಿ ಮಳಿಗೆಗಳಲ್ಲಿ ನನಗೆ ಸೇರಿದ ಅಂಗಡಿ ಇರುವುದಿಲ್ಲ. ಹರಾಜಿನ ದಿನ ಸುಮಾರು 20-30 ಜನರು ಸೇರಿದ್ದರು. ಯಾರು ಎಷ್ಟು ಮೊತ್ತಕ್ಕೆ ಬಿಡ್ ಮಾಡಿದರು ಎಂದು ಹೇಳಲು ಆಗುವುದಿಲ್ಲ. ಆ ದಿನ ನಾನು ಹರಾಜು ಜಾಗಕ್ಕೆ ಹೋಗಿಲ್ಲ, ಹೋಗಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಅಂಗಡಿಯ ಸ್ವಾಧೀನ ಯಾವಾಗ ಕೊಟ್ಟರು ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿಗೆ ಮಳಿಗೆಯ ಸ್ವಾಧೀನ ನೀಡಿದರು ಎಂದು ಹೇಳಿ ಬರೆಸಿಲ್ಲ. ವಾಣಿಜ್ಯ ಮಳಿಗೆ ಆಗುವ ಪೂರ್ವದಲ್ಲಿ ಆ ಜಾಗದಲ್ಲಿ ಡಬ್ಬಾ ಅಂಗಡಿಗಳು ಇದ್ದವು ಎಂದರೆ ಸರಿ. ಸದರಿ ಮಳಿಗೆಯ ಜಾಗದಲ್ಲಿ ಕಟ್ಟಡ ಕಟ್ಟುವ ಪೂರ್ವದಲ್ಲಿ 1 ನೇ ಪ್ರತಿವಾದಿಯ ಚಹಾ ಡಬ್ಬಾ ಅಂಗಡಿ ಇತ್ತು ಎಂದರೆ ಸಾಕ್ಷಿಯು ಸದರಿ ಜಾಗದ ಎದುರಿಗೆ ಇತ್ತು ಎನ್ನುತ್ತಾರೆ. 1 ನೇ ಪ್ರತಿವಾದಿಯ ಚಹಾ ಅಂಗಡಿ ಪಟ್ಟಣ ಪಂಚಾಯತಿ ಜಾಗದಲ್ಲಿ ಇತ್ತು ಎಂದರೆ ಸಾಕ್ಷಿಯು ರಸ್ತೆಯ ಬದಿಗೆ ಇತ್ತು ಎನ್ನುತ್ತಾರೆ. ಪಟ್ಟಣ ಪಂಚಾಯತಿಯವರು ಮೊದಲಿದ್ದ ಡಬ್ಬಾ ಅಂಗಡಿಯವರಿಗೆ ಮೊದಲ ಪ್ರಾಸಸ್ತ್ಯ ಹರಾಜಿನಲ್ಲಿ ಕೊಡಬೇಕು ಎಂದು ಠರಾವು ಪಾಸು ಮಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ದಿನಾಂಕ 26-08-2013 ರಂದು ನಾನು ವಾಣಿಜ್ಯ ಮಳಿಗೆಯ ಮುಂದೆ ಹಾದು ಹೋಗುತ್ತಿದ್ದೆ, ಆ ಕಾರಣದಿಂದ ಆ ದಿನಾಂಕದಂದು 1 ನೇ ಪ್ರತಿವಾದಿ ದಾವಾ ಆಸ್ತಿಯ ಕಬ್ಜೆ ಪಡೆದ ಬಗ್ಗೆ ಗೊತ್ತಾಗಿರುತ್ತದೆ. 1 ನೇ ಪ್ರತಿವಾದಿಯು ದಿನಾಂಕ 26-08-2013 ಕ್ಕಿಂತ ಮುಂಚೆಯೇ ದಾವಾ ಆಸ್ತಿಯಲ್ಲಿ ಚಹಾ ಅಂಗಡಿ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ನನಗೆ ಏನು

ಗೊತ್ತಿಲ್ಲದಿದ್ದರೂ 1 ನೇ ಪ್ರತಿವಾದಿಯು ಕಾನೂನು ಬಾಹಿರ ಸ್ವಾಧೀನ ಪಡೆದಿದ್ದಾನೆ ಎಂದರೆ ಸರಿಯಲ್ಲ. ನಾನು ವಾದಿಗೆ ಅನುಕೂಲ ಆಗಲು ಆತನು ಹೇಳಿದಂತೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು** : 2 ನೇ ಪ್ರತಿವಾದಿಯ ಪರ ಶ್ರೀ ಎಮ್ ಬಿ ಪಿ ವಕೀಲರಿಂದ.

ವಾದಿ ಹರಾಜಿನಲ್ಲಿ ಭಾಗವಹಿಸಿದ್ದನು. 1 ನೇ ಪ್ರತಿವಾದಿ ಹರಾಜಿನಲ್ಲಿ ಭಾಗವಹಿಸಿರಲಿಲ್ಲ. ವಾದಿಯು ಹರಾಜಿನಲ್ಲಿ ಭಾಗವಹಿಸಿ ಬಿಡ್ ಮಾಡಿದ್ದರಿಂದ ದಾವಾ ಆಸ್ತಿ ಆತನ ಹೆಸರಿಗೆ ಆಯಿತು ಹಾಗೂ ಆತನಿಗೆ ಆ ಬಗ್ಗೆ ದಾಖಲೆ ನೀಡಿದರು ಎಂದರೆ ಸರಿ. ಅದೇ ದಿನ ವಾದಿಗೆ ದಾವಾ ಆಸ್ತಿಯ ಚಾವಿಯನ್ನು ಕೊಟ್ಟರು ಎಂದರೆ ಸರಿ.

2 ನೇ ಪ್ರತಿವಾದಿಯು ವಾದಿಗೆ ದಾವಾ ಆಸ್ತಿಯ ಚಾಳಿ ಮತ್ತು ಕಬ್ಜಾ ನೀಡಿದ್ದಾರೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.